2.(ಅ) ವಿತ್ತೀಯ ಕಾರ್ಯಕಲಾಪಗಳು

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, **2012–13** ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ–1)

(ಆ) 2013–14ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು, ಚರ್ಚೆಪ್ರಾರಂಭ ಮಾಡಿ.

ಶ್ರೀ ಸಿದ್ದರಾಮಯ್ಯ: (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಾನ್ಯಶ್ರೀ ಜಗದೀಶ್ ಶೆಟ್ಟರ್‌ರವರು 2013–14ನೇ ಸಾಲಿನ ಆರ್ಥಿಕ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾಗಿ ಹಾಗೂ ಮಾನ್ಯ ಹಣಕಾಸಿನ ಸಚಿವರಾಗಿ ಇದು ಅವರ ಚೊಚ್ಚಲ ಬಜೆಟ್. BJP ಸರ್ಕಾರದ ಅವಧಿಯಲ್ಲಿ ಮಾನ್ಯ ಯಡಿಯೂರಪ್ಪ ನಾಲ್ಕು ಬಜೆಟ್‌ಗಳನ್ನು ಮಂಡಿಸಿದರು. 2008–09,2009–10,2010–11, ಮತ್ತು 2011–12 ಹೀಗೆ ನಾಲ್ಕು ಬಜೆಟ್‌ಗಳನ್ನು ಮಂಡಿಸಿದರು. ಮಾನ್ಯ ಸದಾನಂದಗೌಡರು ಒಂದು ಬಜೆಟ್ ಮಂಡಿಸಿದರು. 2012–13 ಬಜೆಟ್ ಮಾನ್ಯ ಸದಾನಂದಗೌಡರು ಮಂಡಿಸಿದರು. ಈಗ ಇವರು 2013–14 ಬಜೆಟ್ ಮಂಡಿಸಿದ್ದಾರೆ. ಇದು ಅವರ ಚೊಚ್ಚಲ ಮುಂಗಡ ಪತ್ರ. ನಾನು ಆಗಲೇ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಹೇಳಿದ್ದೇನೆ. ಇವರಿಗೆ ಸರ್ಕಾರ ಬಹುಮತ ಇಲ್ಲದೇ ಇರುವುದರಿಂದ, ಏಕೆ ಬಹುಮತ ಇಲ್ಲವೆಂದೂ ಕೂಡ ನೆನ್ನೆ ಎಲ್ಲಾ ಹೇಳಿದೇನೆ. 12 ಜನ ಶಾಸಕರು ರಾಜೀನಾಮೆ ಕೊಟ್ಟಿದ್ದಾರೆ. ಇನ್ನೂ ಇಬ್ಬರ ರಾಜೀನಾಮೆ accept ಆಗಬೇಕೆಂಬ ಕಾರಣದಿಂದ ಪೆಂಡಿಂಗ್ ಇದೆ. ಅವರದೂ accept ಆದರೆ 14 ಜನ ರಾಜೀನಾಮೆ ಕೊಟ್ಟ ಹಾಗಾಗುತ್ತದೆ. ಇನ್ನೊಂದು ನಾಲ್ಕೈದು ಜನ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರು ಯಾವಾಗ ರಾಜೀನಾಮೆ